# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.

**ಅಸಲು ದಾವಾ ಸಂಖ್ಯೆ.233/2022** **ದಿನಾಂಕ:3-7-2024**

**ಪಿ.ಡಬ್ಲ್ಯೂ:1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಡಿ ಎನ್ ಎಂ ವಕೀಲರಿಂದ**

5. ನಾನು ನಿಪಿ-5 ರಿಂದ 8 ರ ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಠಿಸಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಿಂಚಣಿ ವೇತನವು ಪ್ರಗತಿ ಗ್ರಾಮೀಣ ಬ್ಯಾಂಕು ಹೊಸದುರ್ಗ ಶಾಖೆಯ ಸಿದ್ದೇಶರವರ ಖಾತೆಗೆ ಜಮಾ ಆಗುತ್ತದೆ. ಸದರಿ ಬ್ಯಾಂಕಿನಲ್ಲಿ ಸಿದ್ದೇಶ  ಚೆಕ್ಕಿಗೆ ಸಹಿ ಮಾಡಿ ಹಾಜರುಮಾಡಿದರೆ ನಗದು ಪಾವತಿ ಮಾಡುತ್ತಾರೆ. ನಿಡಿ-6 ರ ನ್ಯೂನತಾ ಪ್ರಮಾಣಪತ್ರವನ್ನು ಸಹ ಈ ದಾವೆಗೋಸ್ಕರ ಸೃಷ್ಠಿಸಿ ಹಾಜರುಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಡಿ-5 ರಿಂದ 8 ರ ದಾಖಲೆಗಳು 4 ವರ್ಷಗಳ ಇತ್ತೀಚಿನ ದಾಖಲೆಗಳು ಎಂದರೆ ಸಾಕ್ಷಿಯು 2016 ರಿಂದ ತೋರಿಸುತ್ತಿರುವ ಬಗ್ಗೆ ದಾಖಲೆಗಳು ಎಂದು ನುಡಿಯುತ್ತಾರೆ.

6. ದಿನಾಂಕ 15-12-2020 ರಂದು ನಾನು ಮತ್ತು ಸಿದ್ದೇಶ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸತೀಶ ತಂದೆ ಗುರುಸಿದ್ದಪ್ಪರವರಿಗೆ ನೊಂದಾಯಿತ ಕ್ರಯದ ಸ್ವಾಧೀನರಹಿತ ಕರಾರುಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ದಿನಾಂಕ 17-5-1923 ರಂದು ಮನೆ ಆಸ್ತಿಗೆ ಸಂಬಂಧಿಸಿದಂತೆ ನಾನು ಮತ್ತು ಸಿದ್ದೇಶ ನಂದನ್ ಕುಮಾರ್ ತಂದೆ ಜಯಣ್ಣ ರವರಿಗೆ ಶುದ್ದ ಕ್ರಯಪತ್ರ ಬರೆದು ನೋಂದಾಯಿಸಿಕೊಟ್ಟಿರುತ್ತೇವೆ ಎಂದರೆ ಸರಿ. ಈರೀತಿ ಸಿದ್ದೇಶರವರು ಬ್ಯಾಂಕಿನ ವಹಿವಾಟು ಹಾಗೂ ಕ್ರಯಪತ್ರ್ರಗಳನ್ನು ಬರೆದುಕೊಡಲು ಮಾನಸಿಕವಾಗಿ

ಸದೃಢವಾಗಿದ್ದರೂ ಆತನ ಮಾನಸಿಕ ಸ್ಥಿತಿ ಸರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**